Registration of Women Graduates & Post Graduates in the Employment Exchanges.

447. SRI G. RAJU GOWDA (Honur).—Will the Minister of State for Women and Childrens Welfare be pleased to state.—

(a) the number of women graduates and post-graduates who have registered their names in Employment Exchanges upto 15th March 1981 in Karnataka State ;

(b) the total number of women graduates who are unemployed ;

(c) the concessions provided to women Government Employees in comparision to male Government Employees ;

(d) the places where lodging and boarding facilities have been provided to working women ?

SMT. MANORAMA MADHWARAJ (Minister of State for Women and Childrens Welfare).—

(a) The total number of Women Graduates and Post-Graduates who have registered their names in Employment Exchange in Karnataka for employment are 13,631 upto the end of 15th March 1981. Out of them, 12,662 are graduates and 969 are post-graduates.

(b) Since there is no account of unemployed, those who have registered their names in the employment exchanges may be considered as unemployed. 13,631 women graduates and post-graduates have registered as on 15th March 1981. Out of them, the graduates and post-graduates are 12,662 and 969 respectively.

(c) As per Section 135 of Karnataka Civil Service Rules, 1958 90 days of maternity leave for living Children delivery to married and confinement leave for not more then 6 weeks during abortion, have been provided. And apart from this, 90 days maternity leave is available, if undergone family planning operation even after having more than 3 children.

A seperate resting room (ladies lounge) has been arranged to women employees in Vidhana Soudha. A part from this, an important concession means, widow who desires to enter in Government employment 10 years maximum age limit concession in addition to general age limit has been provided.

(d) The dwelling houses to working women in Bangalore, Dharwad, Belgaum, Hassan, Dakshina Kannada, Manipal, Shimoga, Mysore, Mandya and Gulbarga have been provided. So, total 19 dwelling houses are in existence in the State.

Sanction has already been obtained to 4 in Bangalore, one in Mangalore and one in Manipal and building construction works are under progress.

ಶ್ರೀ ಜಿ. ರಾಜುಗೌಡ.—ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರನ್ನು ನೋಂದಾಯಿಸಿರ ತಕ್ಕವರ ಪೈಕಿ ಯಾರಿಗೂ ಉದ್ಯೋಗ ದೊರಕಿಲ್ಲವೆ? ಇವೊತ್ತು ನಿರುದ್ಯೋಗದ ಹೊಡೆತ ಪುರುಷರಿಗಿಂತಲೂ ಮಹಿಳೆಯರಿಗೆ ಜಾಸ್ತಿ ಇರುವುದರಿಂದ ಈ ನ್ಯೂನತೆಯನ್ನು ಸರಿಪಡಿಸುವುದಕ್ಕೆ ತಾವು ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀಮತಿ ಮನೋರಮ ಮಧ್ವರಾಜ್.—ಪದವೀಧರ ಮಹಿಳೆಯರಲ್ಲಿ ೧೯೭೯-೮೦ನೇ ಇಸವಿಯಲ್ಲಿ ೪೧೨ ಜನ ಪದವೀಧರರಿಗೆ, ೧೮ ಜನ ಸ್ನಾತಕೋತ್ತರ ಪದವೀಧರರಿಗೆ ಕೆಲಸ ಸಿಕ್ಕಿದೆ. ೧೯೮೦-೮೧ರಲ್ಲಿ ೩೬೮ ಜನ ಪದವೀಧರರಿಗೆ, ೧೮ ಜನ ಸ್ನಾತಕೋತ್ತರ ಪದವೀಧರರಿಗೆ ಕೆಲಸ ಸಿಕ್ಕಿದೆ. ಮಾನ್ಯ ಸದಸ್ಯರು ಪುರುಷರಿಗಿಂತಲೂ ಮಹಿಳೆಯರಿಗೆ ನಿರುದ್ಯೋಗದ ಸಮಸ್ಯೆ ಜಾಸ್ತಿ ಇದೆ ಎಂದು ತಿಳಿಸಿದ್ದಾರೆ. ಇವೊತ್ತು ನಾವು ಮಹಿಳೆಯರಿಗೋಸ್ಕರವೇ ಜಾಸ್ತಿ ಪ್ರಯತ್ನ ಮಾಡಲಿಕ್ಕೆ ಹೋದರೆ ಭೇದ ಮಾಡಿದಂತಾಗುತ್ತದೆ. ಆ ರೀತಿ ಭೇದ ಭಾವ ಮಾಡಲಿಕ್ಕೆ ಆಗುವುದಿಲ್ಲ. ಪುರುಷರಿಗೂ, ಮಹಿಳೆಯರಿಗೂ, ಇಬ್ಬರಿಗೂ ಕೆಲಸ ಸಿಕ್ಕಬೇಕು. ಆದರಲ್ಲಿ ಸರ್ಕಾರ ಭೇದ ಭಾವ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಜಿ. ರಾಜುಗೌಡ.—೧೩,೬೩೧ ಮಹಿಳಾ ಪದವೀಧರರು ಹಾಗೂ ಮಹಿಳಾ ಸ್ನಾತಕೋತ್ತರ ಪದವೀಧರರು ಕರ್ನಾಟಕ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರುಗಳನ್ನು ಉದ್ಯೋಗಕ್ಕಾಗಿ ನೋಂದಾಯಿಸಿದ್ದಾರೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ನನಗೆ ತಿಳಿದ ರೀತಿಯಲ್ಲಿ ನಿರುದ್ಯೋಗದ ಹೊಡೆತ ಪುರುಷರಿಗಿಂತಲೂ ಮಹಿಳೆಯರಿಗೆ ಜಾಸ್ತಿ ಇರುತ್ತದೆ. ಈ ನ್ಯೂನತೆಯನ್ನು ಸರಿಪಡಿಸಲಿಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಾ ? ಇವರ ಪೈಕಿ ಇದುವರೆಗೆ ಎಷ್ಟು ಜನರಿಗೆ ಕೆಲಸ ಸಿಕ್ಕಿದೆ?

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಈ ಪ್ರಶ್ನೆಗೆ ಉತ್ತರವನ್ನು ಹೇಳಿದ್ದೇನೆ. ೧೯೭೯-೮೦ರಲ್ಲಿ ೪೧೨ ಜನ ಪದವೀಧರರಿಗೆ. ೧೮ ಜನ ಸ್ನಾತಕೋತ್ತರ ಪದವೀಧರರಿಗೆ ಕೆಲಸ ಸಿಕ್ಕಿದೆ. ೧೯೮೦-೮೧ರಲ್ಲಿ ೩೬೮ ಜನ ಪದವೀಧರರಿಗೆ, ೧೮ ಜನ ಸ್ನಾತಕೋತ್ತರ ಪದವೀಧರರಿಗೆ ಕೆಲಸ ಸಿಕ್ಕಿದೆ.

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪುರುಷರಿಗಿಂತಲೂ ಮಹಿಳೆಯರಿಗೆ ನಿರುದ್ಯೋಗ ಸಮಸ್ಯೆ ಜಾಸ್ತಿ ಇದೆ ಎನ್ನುವುದನ್ನು ತಿಳಿಸಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಇಷ್ಟೆ, ಇವೊತ್ತು ಪದವೀಧರ ಹಾಗೂ ಸ್ನಾತಕೊತ್ತರ ಪದವೀಧರರು ಏನು ನಿರುದ್ಯೋಗಿಗಳಾಗಿದ್ದಾರೆ ಅವರಿಗೆ ಕ್ರಾಫ್ಟ್ ಓರಿಯಂಟೆಡ್, ಜಾಬ್ ಓರಿಯಂಟೆಡ್ ವಿದ್ಯಾಭ್ಯಾಸ ಕೊಡುವುದಕ್ಕೆ ಸರ್ಕಾರ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತದೆಯೇ ?

ಶ್ರೀಮತಿ ಮನೋರಮ ಮಧ್ವರಾಜ್.—ಅದನ್ನು ಪರಿಶೀಲಿಸಬಹುದು.

SRI MALLUR ANANDA RAO.—The question (c) reads thus :

Will the Minister of State for Women and Children's Welfare be pleased to state:

"the concessions provided to women Government employees in comparision to male Government employees

If it is in comparison with male employees, why this discrimination.

MR. SPEAKER.—This question need not be answered.

ಶ್ರೀ ಜಿ. ರಾಜುಗೌಡ.—ಜೀವಂತ ಮಕ್ಕಳ ಹೆರಿಗೆಗಾಗಿ ೯೦ ದಿನಗಳ ಪ್ರಸೂತಿ ರಜೆಯನ್ನು ಕಲ್ಪಿಸಿದ್ದೀರಿ. ಅದೇ ಸತ್ತ ಮಕ್ಕಳ ಹೆರಿಗೆಯಾದರೆ ಏನು ಸೌಲಭ್ಯ ಕಲ್ಪಿಸಿದ್ದೀರಿ ? ಈಗ ೯ ಜಿಲ್ಲಾ ಕೇಂದ್ರಗಳಲ್ಲಿ ವಸತಿ ಗೃಹಗಳನ್ನು ಕಲ್ಪಿಸಿದ್ದೀರಿ. ಬೇರೆ ಕಡೆಗಳಲ್ಲಿ ವಸತಿ ಗೃಹಗಳನ್ನು ಯಾವಾಗ ಕಲ್ಪಿಸುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೆ, ಜೀವಂತ ಮಕ್ಕಳಿಗೆ ತಾಯಿ ಹಾಲು ಕೊಡಬೇಕಾದ್ದರಿಂದ ಅಷ್ಟು ರಜೆ ಕೊಡಬೇಕಾಗುತ್ತದೆ. ಆದೇ ಸತ್ತ ಮಗುವಿನ ತಾಯಿಗೆ ಅಷ್ಟು ಸಮಯ ರಜೆ ಇರುವುದು ಅಗತ್ಯವಿರುವುದಿಲ್ಲ.

ಶ್ರೀ ಜಿ. ರಾಜುಗೌಡ.—ಮಗು ಹುಟ್ಟಿದ ತಕ್ಷಣ ಸತ್ತು ಹೋದಂಥ ಸಂದರ್ಭದಲ್ಲಿ ಆ ತಾಯಿಗೆ ಯಾವ ರೀತಿ ಸೌಲಭ್ಯ ಕಲ್ಪಿಸಿ ಕೊಡುತ್ತೀರಿ ?

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಗೆ ನಾವು ಅಚ್ಚು ಹಾಕಿಸಿರುವುದರಲ್ಲಿ ಈಗಾಗಲೇ ಉತ್ತರವನ್ನು ಒದಗಿಸಿದ್ದೇವೆ.

ಶ್ರೀ ಜಿ. ರಾಜುಗೌಡ.—ಜೀವಂತ ಮಕ್ಕಳ ಹೆರಿಗೆಗೆ ೯೦ ದಿನಗಳ ಪ್ರಸೂತಿ ರಜೆಯನ್ನು ಕೊಡುತ್ತಿದ್ದೀರಿ. ಹುಟ್ಟಿದ ತಕ್ಷಣ ಸತ್ತು ಹೋದಂಥ ಮಗುವಿನ ತಾಯಿಗೆ ಏನು ಸೌಲಭ್ಯ ಕಲ್ಪಿಸಿ ಕೊಡುತ್ತೀರಿ ?

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ನಾನು ಈಗಾಗಲೇ ನಾನು ಉತ್ತರ ಹೇಳಿದ್ದೇನೆ. ಜೀವಂತ ಮಗುವಿಗೆ ತಾಯಿ ಹಾಲು ಕೊಡಬೇಕಾದ್ದರಿಂದ ಅಷ್ಟು ದಿವಸ ರಜೆ ಕೊಡುವುದು ಅಗತ್ಯ ಇದೆ. ಆದೇ ಸತ್ತ ಮಗುವಿನ ತಾಯಿ ಮನೆಯಲ್ಲಿ ಇದ್ದು ಅಳುವ ಬದಲು ಕೆಲಸಕ್ಕೆ ಬರುವುದು ಒಳ್ಳೆಯದು. ಗರ್ಭ ಸ್ರಾವ, ಗರ್ಭಪಾತದ ಸಂದರ್ಭಗಳಲ್ಲಿ ೬ ವಾರಗಳಿಗೆ ವಿಶ್ರಾಂತಿ ಪೆರಿಗೆ ರಜೆಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ.

ಶ್ರೀ ಜಿ. ರಾಜುಗೌಡ.—ದುಡಿಯುವ ಮಹಿಳೆಯರಿಗೆ ಈಗ ೯ ಜಿಲ್ಲೆಗಳಲ್ಲಿ ವಸತಿ ಗೃಹಗಳನ್ನು ಕಟ್ಟಲಾಗಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಇನ್ನುಳಿದ ಜಿಲ್ಲೆಗಳಲ್ಲಿ ದುಡಿಯುವ ಮಹಿಳೆಯರಿಗೆ ಯಾವಾಗ ವಸತಿ ಗೃಹಗಳನ್ನು ಕಲ್ಪಿಸಿಕೊಡುತ್ತಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀಮತಿ ಮನೋರಮ ಮಧ್ವರಾಜ್.—೨೫ ಜನ ದುಡಿಯುವ ಮಹಿಳೆಯರು ಇದ್ದರೆ ಅವರಿಗೆ ವಸತಿ ಗೃಹ ಕಲ್ಪಿಸಿ ಕೊಡಬೇಕೆಂದು ಇದೆ. ಈ ವಿಚಾರದಲ್ಲಿ ಸ್ವಯಂಸೇವಾ ಸಂಸ್ಥೆಗಳವರು ಮುಂದೆ ಬಂದರೆ ನಾವು ಎಲ್ಲಾ ಕಡೆ ಕೊಡುತ್ತೇವೆ. ಮಾನ್ಯ ಸದಸ್ಯರು ಈ ಒಂದು ಮಾಹಿತಿಯನ್ನು ತಮ್ಮ ಕ್ಷೇತ್ರದ ಜನರಿಗೆ ತಿಳಿಸಲು ಸ್ವಯಂಸೇವಾ ಸಂಸ್ಥೆಗಳ ಮೂಲಕ ವಸತಿ ಗೃಹಗಳನ್ನು ಕಲ್ಪಿಸಿಕೊಡಲಿಕ್ಕೆ ನಮಗೆ ಯಾವುದೇ ತೊಂದರೆ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸಮಾಧಾನಕರವಾದ ಉತ್ತರವನ್ನು ಕೊಟ್ಟಿದ್ದಾರೆ. ಇಂಗ್ಲಿಷ್‌ನಲ್ಲಿ ಅಚ್ಚು ಹಾಕಿರುವುದರಲ್ಲಿ 'women Government employees in comparison to male Government employees ಎಂದು ಇದೆ. ಎಂಪ್ಲಾಯೀಸ್ ಅಂದರೆ ನಮಗೆ ಅರ್ಥವಾಗುತ್ತದೆ. ಈ ಸರ್ಕಾರ ವುಮನ್ ಗವರ್ನ್‌ಮೆಂಟೇ, ಮೇಲ್ ಗವರ್ನ್‌ಮೆಂಟೇ ತಿಳಿಸಬೇಕು.

ಅಧ್ಯಕ್ಷರು.—ಅದು ಇಂಗ್ಲಿಷ್ ಭಾಷೆ.

Falling up of live wire from the K.E.B. Pole near Unnakal cross of Hubli City.

499 SRI M. G. JAGTARGHAR (Hubli).—Will the Ministes of State of Power be pleased to state.—

(a) whether it is a fact that the citizens of the locality, have brought to the notice of Government during May 1981, about the possibility of falling up of live wire from the K. E. B. Pole near Unakal cross of Hubli City ;